ಶ್ರೀ ಹೆಚ್.ಡಿ. ರೇವಣ್ಣ : ಕಳೆದ ಹತ್ತು ವರ್ಷಗಳಲ್ಲಿ ಸುಮಾರು6 ಲಕ್ಷದ75 ಸಾವಿರ ರೂ.ಗಳನ್ನು ಇದಕ್ಕಾಗಿ ಖರ್ಚು ಮಾಡಿದ್ದರೆ. ನಾವು ಈ ಒಂದೇ ವರ್ಷದಲ್ಲಿ 6 ಲಕ್ಷದ 75 ಸಾವಿರ ಕೊಟ್ಟಿದ್ದೇವೆ. ತಮಗೇ ಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದೇವೆ. ತಾವು ಹೇಳಿದ ಕೊಳಚೆ ಪ್ರದೇಶದಲ್ಲಿ ನಾವು ಕೆಲಸವನ್ನು ಮಾಡಲು ಕ್ರಮ ತೆಗೆದುಕೊಳ್ಳುತ್ತೇವೆ. ತಾವು ಹೇಳಿರುವ ಕೊಳಚೆ ಪ್ರದೇಶದ ಬಗ್ಗೆಯೇ ನಾವು ಟೆಂಡರ್‌ಅನ್ನು ಕರೆದಿರುವುದು, ನಾವೇನು ಹೊಸದಾಗಿ ಟೆಂಡರ್ ಅನ್ನು ಕರೆದಿಲ್ಲ. ನಮ್ಮ ಕಡೆಯಿಂದ ಆ ರೀತಿ ಯಾವುದೇ ಪ್ರಪೋಸಲ್‌ಗಳಿಲ್ಲ.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ಮುಗಿಯಿತು. ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಸಿ. ನಾಣಯ್ಯ : (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಹತ್ತನೆ ಪಟ್ಟಿಯ ಒಟ್ಟು 61 ಪ್ರಶ್ನೆಗಳ ಪೈಕಿ 35 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.26-3-98ರಂದು ಪ್ರಶ್ನೋತ್ತರ ನಡೆಯದು ಕಾರಣ 13 ಚುಕ್ಕೆ ಗುರುತಿನ, 85 ಚುಕ್ಕೆ ರಹಿತ ಪ್ರಶ್ನೆಗಳಿಗೆ ಉತ್ತರವನ್ನು ಸದನದ ಮುಂದೆ ಮಂಡಿಸುತ್ತೇನೆ.

ದಕ್ಷಿಣ ಜಿಲ್ಲೆಯಲ್ಲಿ ಕಾಳು ಮೆಣಸು ಯೋಜನೆ ಅನುಷ್ಠಾನ

596 - ಶ್ರೀ ಎಸ್. ಅಂಗಾರ (ಸುಳ್ಯ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ತೋಟಗಾರಿಕೆ ಇಲಾಖೆಯಡಿಯಲ್ಲಿ 1995-96 ಹಾಗೂ 1996-97 ನೇ ಸಾಲಿನಲ್ಲಿ ಕಾಳು ಮೆಣಸು ಯೋಜನೆಯಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಬಿಡುಗಡೆ ಮಾಡಿದ ಅನುದಾನ ಹಾಗೂ ಉತ್ಪಾದಿಸಿದ ಗಿಡಗಳು, ಮಾರಾಟ ಮಾಡಿದ ಗಿಡಗಳು ಎಷ್ಟು (ತಾಲ್ಲೂಕುವಾರು ವಿವರ ಒದಗಿಸುವುದು)?

ಶ್ರೀ ಹೆಚ್. ನಾಗಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) 1995-96 ಹಾಗೂ 1996-97ನೇ ಸಾಲಿಗೆ ಜಿಲ್ಲೆ ಕಾಳು ಮೆಣಸು ಯೋಜನೆಯಡಿಯಲ್ಲಿ ಬಿಡುಗಡೆ ಮಾಡಿದ ಅನುದಾನ ಇತ್ಯಾದಿಗಳ ವಿವರಗಳು:

		1995-96	*1996-97*
ಅ)	ಬಿಡುಗಡೆ ಮಾಡಿದ ಅನುದಾನ	10.50 ಲಕ್ಷ ರೂ. ಗಳು	1.50 ಲಕ್ಷ ರೂ.ಗಳು
ಆ)	ಉತ್ಪಾದಿಸಿರುವ ಗಿಡಗಳು	6,14,840 ಕಡ್ಡಿಗಳು	1,00,550
ಇ)	ಮಾರಾಟ ಮಾಡಿದ ಗಿಡಗಳು	5,14,359	80,450

(ತಾಲ್ಲೂಕುವಾರು ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ).